
ಕಾಗೆಗಳು ಬರುತ್ತವೆ ಪ್ರಯತ್ನಿಸಿ ಎಂದಳು. ಮರುದಿನ ಬೆಳಿಗ್ಗೆ ಎಲ್ಲರೂ ಅವರವರ ಕೆಲಸಗಳಿಗೆ ತೆರಳಿದ ನಂತರ ಮೊಸರನ್ನಕ್ಕೆ ಎಳ್ಳುದುರಿಸಿ ಒಂದು ಬಟ್ಟಲಿನಲ್ಲಿರಿಸಿಕೊಂಡು ಮನೆಯ ಬಳಿಯೇ ಇದ್ದ ರುಡಾಲ್ಫ್ ಸೇಫರ್ಟ್ ಪಾರ್ಕಿನತ್ತ ಪಾದ ಬೆಳೆಸಿದೆ. ಅಚ್ಚುಕಟ್ಟಾದ ರಸ್ತೆಯಲ್ಲಿ ಅಷ್ಟೇ ಅಚ್ಚುಕಟ್ಟಾಗಿ ಬಟ್ಟೆ ಧರಿಸಿದ ಜರ್ಮನ್ಸ್ ನಡುವೆ ಸಾಗುವಾಗ ಕೊಂಚ ಕೀಳರಿಮೆ ಕಾಡಿದ್ದು ಸುಳ್ಳಲ್ಲ. ಮಗನ ಮನೆಯಿಂದ ಐನೂರು ಆರು ನೂರು ಮೀಟರಿನ ಅಂತರದಲ್ಲಿದ್ದ ಆ ಉದ್ಯಾನವನಕ್ಕೆ ಒಂದೆರಡು ನಿಮಿಷಗಳಲ್ಲೇ ಬಂದಿಳಿದಾಗ ನನ್ನ ಕಣ್ಣುಗಳು ಕಾಗೆಗಳಿಗಾಗಿ ಭೂಮ್ಯಾಕಾಶವನ್ನೆಲ್ಲಾ ಸ್ಕ್ಯಾನ್ ಮಾಡತೊಡಗಿದವು.

ಶರತ್ಕಾಲದ ಫಾಲ್ ಸೀಸನ್ ಪ್ರಾರಂಭವಾಗಿದ್ದರಿಂದ ಮರಗಳೆಲ್ಲಾ ಹಳದಿ ಬಣ್ಣಕ್ಕೆ ತಿರುಗಿ ಅದಾಗಲೇ ಎಲೆಯುದುರಿಸಿಕೊಂಡು ಐಟಂ ಡ್ಯಾನ್ಸರ್‌ನಂತೆ ಅರೆಬರೆ ಬೆತ್ತಲಾಗಿದ್ದವು. ಮಹಿಳೆಯೊಬ್ಬಳು ಸ್ಟ್ರೋಲರ್‌ನಲ್ಲಿ ಮಗುವನ್ನು ತಳ್ಳಿಕೊಂಡು ಎದುರಿನಿಂದ ಬರುತ್ತಿದ್ದಳು. ಪಕ್ಕದ

**ಇತ್ತೀಚೆಗೆ ಯುವಜನತೆಯ ಬಾಡಿ, ಜಂಕ್ ಫುಡ್‌ಗೆ ಲಿಂಕ್ ಆದಂತೆ ಪಶು ಪಕ್ಷಿಗಳ ಆಹಾರ ಪದ್ಧತಿಯೂ ಬದಲಾಗಿ ಪಾರಂಪರಿಕ ಆಹಾರವನ್ನು ನಾಯಿ, ಬೆಕ್ಕುಗಳು ಮೂಸಿಯೂ ನೋಡದ ಸ್ಥಿತಿ ಸೃಷ್ಟಿಯಾಗಿದೆ.**



ರಸ್ತೆಯಲ್ಲಿದ್ದ ಕಿಂಡರ್ ಗಾರ್ಡನ್‌ನಲ್ಲಿ ಚಿಣ್ಣರು ಮುದ್ದಾಗಿ ಚಿಲಿಪಿಲಿಗೈಯ್ಯುತ್ತಿದ್ದರು. ಬಾಬ್ ಕಟ್ ಮಾಡಿದ ಗ್ರೇ ಹೇರ್ ಅಜ್ಜಿಯೊಬ್ಬಳು ನಾಯಿಯೊಂದಿಗೆ ಅಲ್ಲೇ ಅಡ್ಡಾಡುತ್ತಿದ್ದಳು. ಪಫರ್ ಜಾಕೆಟ್ ತೊಟ್ಟು ಬ್ಲೂ ಜೀನ್ಸ್ ಪ್ಯಾಂಟ್, ವಿಂಟರ್ ಬೂಡ್ಸ್ ಧರಿಸಿ ಎಡಗೈಲಿ ಸಿಗರೇಟ್ ಎಳೆಯುತ್ತಿದ್ದ ಆಕೆ ಬಲಗೈಲಿ ನಾಯಿಗೆ ಏನೋ ಸೂಚನೆ ನೀಡುತ್ತಿದ್ದಳು. ಚೈನಿನ ಬಂಧ ಇಲ್ಲದೆಯೂ ಅದು ಅವಳಿಗೆ ವಿಧೇಯವಾಗಿತ್ತು. ವಯಸ್ಸು ಎಂಬತ್ತು ದಾಟಿದರೂ ಸ್ವಾವಲಂಬಿಯಾಗಿ ಬದುಕುತ್ತಾ ಉತ್ಸಾಹದಿಂದಿರುವ ಇಲ್ಲಿನ ವೃದ್ಧರ ಜೀವನೋತ್ಸಾಹ ನನಗೆ ಅಚ್ಚರಿ ಮೂಡಿಸಿತು. ನಮ್ಮಲ್ಲಿ ಅರವತ್ತು ದಾಟಿದೊಡನೆಯೇ ಊರು ಹೋಗು ಅಂತಿದೆ ಕಾಡು ಬಾ ಅಂತಿದೆ ನಮ್ಮದು ಇನ್ನೇನು ಮುಗೀತು ಎಂದು ಯಾವುದೇ ಬಿಮಾರಿ ಇಲ್ಲದೆಯೂ ಮಾರಿ ಸಪ್ಪಗಾಗಿಸಿಕೊಂಡು ಕುಗ್ಗುತ್ತಾ ಮಕ್ಕಳ ಮೇಲಿನ ಅವಲಂಬನೆಗೆ ಜಗ್ಗುವ ಸ್ಥಿತಿಗೆ ಟ್ಯೂನ್ ಆಗಿಬಿಡುವೆವು. ಆ ವೃದ್ಧೆ ಕರೆತಂದಿದ್ದ ನಾಯಿ ಬ್ರೂಕ್ಲಿನ್ ಕಾಲರ್ ಬೆಲ್ಟ್ ಧರಿಸಿಕೊಂಡು ಮರದ ಮೇಲೆ ಕುಳಿತು ಹ್ಯಾಜೆಲ್ ನಟ್ಸ್ ತಿನ್ನುತ್ತಿದ್ದ ಅಳಿಲಿನೆಡೆಗೆ ಗುರಾಯಿಸುತ್ತಿತ್ತು. ಪುಟ್ಟ ಪುಟ್ಟ ಮನೆಯಾಕಾರದ ಗೂಡುಗಳಲ್ಲಿ ಅವುಗಳಿಗೆಂದೇ ಜನರು ಪೀನಟ್ಸ್, ಸೀಡ್ ಮಿಕ್ಸ್‌ನಿಂದ ಮಾಡಿದ ಗೋಧಿಯ ಉಂಡೆಗಳನ್ನಿರಿಸಿ ಹೋಗಿದ್ದರು. ನಾಯಿಯ ಕುತ್ತಿಗೆಯ ಬೆಲ್ಟ್‌ನಲ್ಲಿದ್ದ ಡಿಜಿಟಲ್ ಐಡೆಂಟಿಟಿಯಿಂದ ಅದು ಕಳೆದು ಹೋದರೂ ಸುಲಭದಲ್ಲಿ ಟ್ರೇಸ್ ಔಟ್ ಮಾಡಿಬಿಡುವ ವ್ಯವಸ್ಥೆಯಿತ್ತು. ನಮ್ಮಲ್ಲಿ ಅಲ್ಝೈಮರ್‌ನಿಂದ ನರಳುವ ವೃದ್ಧರ ಜೇಬಿಗೆ ಒಂದು ಐಡಿ ಕಾರ್ಡ್ ಕೂಡಾ ಇರಿಸಿ ಕಳಿಸದೆ ಅವರು ಕಷ್ಟಪಡುವುದನ್ನು ನೆನೆದು ನಿಟ್ಟುಸಿರಾದೆ.

ಸುತ್ತಲಿನ ಪರಿಸರ ವೀಕ್ಷಣೆಯಲ್ಲಿ ಮುಳುಗಿ ಹೋಗಿದ್ದ ಸಮಯ ಕೈಯಲ್ಲಿದ್ದ ತಿಲಾನ್ನದ ಬಟ್ಟಲು, ಬಂದ ಕಾರ್ಯ ಮುಗಿಸೆಂದು ಎಚ್ಚರಿಸಿತು. ಸುತ್ತಲೂ ದೃಷ್ಟಿ ಹಾಯಿಸಿದೆ. ನಾಲ್ಕಾರು ಕಾಗೆಗಳು ಕಾ..ಕಾ... ಎಂದು ಹಾರಾಡುತ್ತಾ ಅಲ್ಲಲ್ಲಿ ಹರಡಿದ್ದ ಕಾಳು, ಬ್ರೆಡ್ ತುಂಡುಗಳು, ಮಳೆ ಹುಳುಗಳನ್ನು ಹುಡುಕಿ ಭಕ್ಷಿಸುತ್ತಿದ್ದವು. ಮನಸ್ಸು ಹರ್ಷದಿಂದ ಹುರ್ರೇ... ಎಂದಿತು. ನಮ್ಮೂರಿನಲ್ಲಿ ಕಾಣದ ಕಾಗೆಗಳು ಇಲ್ಲಿ ವಲಸೆ ಬಂದಿವೆಯೇ? ಇಲ್ಲ ಇವು ವಿದೇಶಿ ಕಾಗೆಗಳೇ ಎಂಬ ಗೊಂದಲದಲ್ಲೇ ಅವುಗಳ ಭೌತಿಕಾಕಾರವನ್ನು ದಿಟ್ಟಿಸಿದೆ. ಐದಾರು ಗ್ರೇ ಕಲರ್ ಕಾಗೆಗಳ ನಡುವೆ ಒಂದೆರಡು ಅಚ್ಚ ಕಪ್ಪಗಿನವೂ ಇದ್ದವು. ಈ ಡಾರ್ಕ್ ಕಾಗೆಗಳು ನನ್ನಂತೆಯೇ ಮೈಗ್ರೇಟ್ ಆದವು ಇಲ್ಲವೇ ಇಲ್ಲಿ ಮರುಜನ್ಮ ಪಡೆದವು ಎಂದು ತೀರ್ಮಾನಿಸಿದೆ. ಅದಕ್ಕೆ ಪುಷ್ಟಿ ಕೊಡುವಂತೆ ಗಾಢ ಬಣ್ಣದವು ಆಗಾಗ ಎಗರಿ ಕಿರುಚಾಡುತ್ತಾ ಇತರ ಕಾಗೆಗಳಿಗೆ ಬಿಡದಂತೆ ಹೆಚ್ಚಿನ ಆಹಾರವನ್ನು ಭಕ್ಷಿಸುವುದನ್ನು ಕಂಡಾಗ ಇವು ಭಾರತದವೇ ಎಂದು ಕನ್ಫರ್ಮ್ ಆಯ್ತು. ವೀಸಾ ಪಾಸ್‌ಪೋರ್ಟ್ ಹಂಗಿಲ್ಲದೆ ಬಂದಿಳಿದಿದ್ದ ಇವು ನಾನಿರಿಸುವ ಪಿಂಡವನ್ನು ಭಕ್ಷಿಸಿ ಪಿತೃದೋಷ ಪರಿಹರಿಸಲು ಬಂದಿರುವ ಪೂರ್ವಜರೇ ಇರಬಹುದು ಎನಿಸಿತು.

ಮೆಲ್ಲನೆ ಮೊಸರನ್ನ ಹೊರತೆಗೆದೆ. ಬಹಿರಂಗವಾಗಿ ಅದನ್ನು ಇರಿಸಲು ಮನಸ್ಸು ಹಿಂಜರಿಯುತ್ತಿತ್ತು. ಇಲ್ಲಿನ ಕಟ್ಟುನಿಟ್ಟಾದ ಕಾನೂನಿನ ವ್ಯಾಪ್ತಿಗೆ ಇದು ಬರುವುದೋ ಇಲ್ಲವೋ ಎಂಬ ಅನುಮಾನ ಕಾಡಿತು. ನನ್ನ ಶಂಕಿತ ನಡೆಗೆ ಅದಾಗಲೇ ಒಂದಿಬ್ಬರು ಅನುಮಾನಗೊಂಡಿದ್ದರು. ಹಾಗೆಯೇ ಒಂದೆರಡು ನಿಮಿಷ ಅಡ್ಡಾಡಿ ಮೆಲ್ಲನೆ ಮರದಡಿ ಬಟ್ಟಲನ್ನಿಟ್ಟು ದೂರದಲ್ಲಿ ಬಂದು ನಿಂತೆ. ಸುತ್ತಲೂ ಕಣ್ಣಾಡಿಸಿದಾಗ ಎಲ್ಲರೂ ಅವರವರದೇ ಕೆಲಸದಲ್ಲಿ ವ್ಯಸ್ತರಾಗಿದ್ದರು. ಅರೆ ತಾಸು ಕಾದರೂ ಅಲ್ಲೇ ಹಾರಾಡುತ್ತಿದ್ದ ಕಾಗೆಗಳನ್ನು ಈ ಹೊಸ ಬಗೆಯ ಆಹಾರ ಆಕರ್ಷಿಸಿದಂತೆ ಕಾಣಲಿಲ್ಲ. ಮೆಲ್ಲನೆ ಅತ್ತ ಸರಿದು ಬಟ್ಟಲಿನಲ್ಲಿದ್ದ ಎಳ್ಳು ಮೊಸರನ್ನವನ್ನು ನೆಲದಲ್ಲಿ ಚೆಲ್ಲಿ ಬದಿಗೆ ಸರಿದು ನಿಂತೆ. ಕಾ...ಕಾ... ಎನ್ನುತ್ತಾ ಕಾಗೆಗಳು ಅದರ ಮೇಲೆ ಹಾರಾಡಿದವು. ಜರ್ಮನ್ ಮಾತಾಡುವ ಜನರ ನಡುವೆ ಅನುರಣಿಸಿದ ಕಾಗೆಗಳ ಪರಿಚಿತ ಕರೆ ಯೂನಿವರ್ಸಲ್ ಎನಿಸಿ ಆಪ್ತ ಭಾವ ಮೂಡಿತು. ಸಂತೋಷ, ಆತಂಕ, ಗೆಳೆತನಕ್ಕೆ ಭಾಷೆಯ ಹಂಗೇಕೆ? ನೆಲದಲ್ಲಿ ಹರಡಿದ್ದ ಮೊಸರನ್ನವನ್ನು ಮೊದಲು ಕುಕ್ಕಿದ ಕಪ್ಪು ಕಾಗೆಗಳು ಕಾ...ಕಾ... ಎನ್ನುತ್ತಾ ನಸುಬಿಳಿಯವನ್ನು ಆಹ್ವಾನಿಸಿದವು. ಕೂಡಲೇ ಹಾರಿಬಂದು ಜೊತೆಯಾದ ಅವು ಬಾಳೆಲೆಯಲ್ಲಿ ಊಟ ಮಾಡಿ ವಿಶೇಷ ಅನುಭವ ಪಡೆಯುವ ವಿದೇಶೀಯರಂತೆ ಹೊಸ ಬುತ್ತಿಯ ಸವಿದು ಕಾ... ಕಾ... ಎಂದವು. ಕುವೆಂಪು ಆಶಯದಂತೆ ವಿಶ್ವ ಬಂಧುತ್ವದ ದನಿ ಇಲ್ಲಿ ಸಾಕಾರಗೊಂಡಿತ್ತು. ಬದುಕಿನ ಬನಿ, ಸೌಂದರ್ಯ ಹಾಗೂ ನಶ್ವರತೆಯನ್ನು ಒಟ್ಟಾಗಿ ಕಟ್ಟಿಕೊಟ್ಟ ಆ ದೃಶ್ಯ ನನ್ನ ಕಣ್ಣುಗಳಲ್ಲಿ ಸೆರೆಯಾಯಿತು. ಅಮ್ಮನಿಗೆ ವಿಡಿಯೊ ಕರೆ ಮಾಡಿ ಕಾಗೆ ಬಳಗವನ್ನು ತೋರಿದಾಗ ಅವರ ಕಂಗಳಲ್ಲಿ ಮಿನುಗಿದ ಬೆಳಕಿನಲ್ಲಿ ಪಿತೃದೋಷ ಪರಿಹರಿಸಿದ ಸಂತಸವಿತ್ತು.

ಪ್ರತಿಕ್ರಿಯಿಸಿ: **feedback@sudha.co.in**